

# ಕನ್ನಡವೆನೆ ಕುಣಿದಾಡುವುದೆನ್ನೆದೆ!

ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದು ಸುಂದರ

ಶಂ.ಗು. ಬಿರಾದಾರ

ಕಣ್ಣ ತುಂಬ ಕನಸು ಚಿಮ್ಮುವ ಬಾಲ್ಯದ ಕನವರಿಕೆ ಎಂದರೇನೆ ಹಾಗೆ. ಹಾವೇರಿಯಲ್ಲಿ ನೆಲೆ ನಿಂತ ಕತೆಗಾರ ಕೋರಗಲ್ಲ ವಿರೂಪಾಕ್ಷಪ್ಪ ಗುರುಗಳು ಆಗೀಗ ನನ್ನನ್ನುದ್ದೇಶಿಸಿ 'ಕಳ್ಳೀಹಾಲಿನ ಹುಡುಗ' ಎಂದು ಕರೆದರಾದರೆ, ತಮ್ಮ 'ಕಳ್ಳುಬಳ್ಳಿಯ ಹುಡುಗ' ಎಂದೇ ಕರೆದಂತೆ ಭಾಸವಾಗುತ್ತದೆ ನನಗೆ. 'ಕಳ್ಳೀ ಹಾಲು' ನನ್ನದೊಂದು ಪುಸ್ತಕದ ಶೀರ್ಷಿಕೆ ಎನ್ನುವುದು ಬೇರೆ ಮಾತು. ಮತ್ತೆ ಬಾಲ್ಯಕ್ಕೆ ಹಿಂತಿರುಗಿದ ಅನುಭವ.

ಮಗುವಾಗುವುದೆಂದರೆ ಸುಮ್ಮನೆ ಏನು? ದೂರದ ಉಡುಪಿಯ ಎಂಬತ್ತರ ಹರೆಯದ 'ಕುಗೋ' (ಗೋಪಾಲ ಭಟ್ಟರು) 'Come ಬಳಿ ಎಂದಾಕ್ಷಣ, ಹತ್ತಿರವಾದಿರಿ' ಅನ್ನುತ್ತಾರೆ. ಹಾಗೆ ಕೈಚಾಚಿ ಕರೆದವರ 'ಕೈಗೂಸು ಆಗುವ ಪರಿ' ಇದೆಯಲ್ಲ ಅದೆಂಥಾ ಭಾಗ್ಯ! ಎಳೆ ಮಗುವಿನ ಆ ಮುಗ್ಧ